ಕ್ರ. ಸಂ.	ಗಿರಣಿಯ ಹೆಸರು	1999-2000 ಅಂತ್ಯಕ್ಕೆ ಲಾಭ:ನಷ್ಟ (ತಾತ್ಕಾಲಿಕ) ರೂ. ಲಕ್ಷಗಳಲ್ಲಿ
10.	ರೈತರ ಸಹಕಾರಿ ನೂಲಿನ ಗಿರಣಿ, ರಾಣೆಬೆನ್ನೂರು	3603.95 ನಷ್ಟ
11.	ಬಿಜಾಪುರ ಸಹಕಾರಿ ನೂಲಿನ ಗಿರಣಿ, ಬಿಜಾಪುರ	ಸಮಾಪನೆಯಲ್ಲಿದೆ
12.	ಬಾಗಲಕೋಟೆ ಸಹಕಾರಿ ನೂಲಿನ ಗಿರಣಿ, ಬಾಗಲಕೋಟೆ	ಸಮಾಪನೆಯಲ್ಲಿದೆ.

ಗೃಹ ಮಂಡಳಿಯಲ್ಲಿ ಬಿಡಿ ನಿವೇಶನ ಮಂಜೂರಾತಿ

3018 - ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪ್ರಸ್ತುತ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕರ್ನಾಟಕ ಗೃಹ ಮಂಡಳಿಯಲ್ಲಿ ಬಿಡಿ ನಿವೇಶನ ಮಂಜೂರು ಮಾಡಲಾದ ಸಂಖ್ಯೆ ಎಷ್ಟು? (ವಿವರ ಒದಗಿಸುವುದು)*

ಆ) *ಬಿಡಿ ನಿವೇಶನ ಹಂಚಿಕೆ ಮಾಡಲು ಮಾನದಂಡಗಳೇನು?*

ಇ) *ಕಾನೂನುಬಾಹಿರವಾಗಿ ಈಗಲೂ ಬಿಡಿ ನಿವೇಶನಗಳನ್ನು ಕರ್ನಾಟಕ ಗೃಹ ಮಂಡಳಿ ಮಂಜೂರು ಮಾಡುತ್ತಿರುವುದು ನಿಜವೇ?*

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) 335

ಆ) ಲಭ್ಯವಿರುವ ಬಿಡಿ ನಿವೇಶನಗಳನ್ನು ಕರ್ನಾಟಕ ಗೃಹ ಮಂಡಳಿ (ಹಂಚಿಕೆ) ನಿಯಮಾವಳಿ 4(ಎ) ಪ್ರಕಾರ ಹಂಚಲಾಗುತ್ತಿದೆ.

ಇ) ನಿಜವಲ್ಲ.

ಬೆಂಗಳೂರು ನಗರದಲ್ಲಿರುವ ಸರ್ಕಾರಿ ಜಮೀನುಗಳು

3021 - ಶ್ರೀ ಮೋಹನ್ ಪಿ.ಸಿ. (ಚಿಕ್ಕಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಸರ್ಕಾರಿ ಜಮೀನಿನ ವಿಸ್ತೀರ್ಣ ಎಷ್ಟು? ತಾಲ್ಲೂಕುವಾರು ವಿವರ ನೀಡಿ?*

ಆ) *ಈ ಪೈಕಿಯಲ್ಲಿ ಇರುವ ಜಮೀನಿನ ವಿಸ್ತೀರ್ಣ ಹಾಗೂ ಒತ್ತುವರಿಯಾಗಿರುವ ಜಮೀನಿನ ವಿಸ್ತೀರ್ಣ ಎಷ್ಟು?*